ಮೆ: ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಶನ್ ಲಿಮಿಟೆಡ್, ರವರು ಬಿದರುಗಡ್ಡೆ ಮರಳು ಬ್ಲಾಕ್ ನಲ್ಲಿ (Block No.01) ಸಾಮನ್ಯ ಮರಳು ಗಣಿಗಾರಿಕೆ ಮಾಡಲು ತುಂಗಭದ್ರಾ ನದಿ ಪಕ್ಕದ Sy.No.19-24, **ಬಿದರುಗಡ್ಡೆ** ಗ್ರಾಮ, ಹೊನ್ನಾಳಿ ತಾಲ್ಲೂಕು, ದಾವಣಗೆರೆ ಜಿಲ್ಲೆಯಲ್ಲಿ ಒಟ್ಟು 24 ಎಕರೆ ಪ್ರದೇಶದಲ್ಲಿ ವರ್ಷಕ್ಕೆ 1,39,861 ಟನ್‌ಗಳಷ್ಟು ಸಾಮನ್ಯ ಮರಳು ಗಣಿಗಾರಿಕೆಯನ್ನು ಅರೆ-ಯಾಂತ್ರಿಕೃತ ಪದ್ಧತಿಯ (Semi-mechanised method) ಪ್ರಕಾರ ಸ್ಥಾಪಿಸಲು ಪ್ರಸ್ತಾವನೆಯನ್ನು ಮಾಡುವ ಉದ್ದೇಶಕ್ಕಾಗಿ (ಯೋಜನಾ ಪ್ರದೇಶದಲ್ಲಿ) ನಡೆದ ಪರಿಸರ ಸಾರ್ವಜನಿಕ ಸಭೆಯ ನಡುವಳಿಗಳು:-

**ದಿನಾಂಕ: 28-09-2022 ರಂದು ಬೆಳಿಗ್ಗೆ 11-00 ಗಂಟೆ.**

**ಸ್ಥಳ: ಶ್ರೀಶೈಲ ಮಲ್ಲಿಕಾರ್ಜುನ ಸಮುದಾಯ ಭವನ,**
**ಬಿದರುಗಡ್ಡೆ ಗ್ರಾಮ,**
**ಹೊನ್ನಾಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ.**

**ಪರಿಸರ ಸಾರ್ವಜನಿಕ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳು:**

| ಕ್ರಮ ಸಂಖ್ಯೆ | ಅಧಿಕಾರಿಗಳ ಹೆಸರು | ಪದನಾಮ |
|---|---|---|
| 1 | ಶ್ರೀ ಲೋಕೇಶ್.ಪಿ.ಎನ್., ಕ.ಆ.ಸೇ. | ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ದಂಡಾಧಿಕಾರಿಗಳು, ದಾವಣಗೆರೆ ಜಿಲ್ಲೆ. |
| 2 | ಶ್ರೀ ಮುರುಳಿಧರ.ಬಿ.ಎಸ್. | ಪ್ರಾದೇಶಿಕ ಹಿರಿಯ ಪರಿಸರ ಅಧಿಕಾರಿ, ವಿಭಾಗೀಯ ಕಛೇರಿ, ಕರಾಮಾನಿಮಂ., ಚಿತ್ರದುರ್ಗ |
| 3 | ಶ್ರೀ ಬಿ.ಕೆ.ಸಂತೋಷ್, | ಪರಿಸರ ಅಧಿಕಾರಿ (ಪ್ರಭಾರ), ಪ್ರಾದೇಶಿಕ ಕಛೇರಿ, ಕರಾಮಾನಿಮಂ., ದಾವಣಗೆರೆ. |

**ಪರಿಸರ ಸಾರ್ವಜನಿಕ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು:**

1. ಶ್ರೀಮತಿ ರಶ್ಮೀ, ತಹಶೀಲ್ದಾರ್, ಹೊನ್ನಾಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ.
2. ಶ್ರೀಮತಿ ರಶ್ಮೀ.ಸಿ.ಆರ್., ಹಿರಿಯ ಭೂ ವಿಜ್ಞಾನಿ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ದಾವಣಗೆರೆ.
3. ಶ್ರೀ ಲೋಹಿತ್ ಕುಮಾರ್ ಪಿ.ಜೆ., ಉಪ ಪರಿಸರ ಅಧಿಕಾರಿ, ಕರಾಮಾನಿಮಂ., ಚಿತ್ರದುರ್ಗ.
4. ಶ್ರೀ ಶಿವಪ್ರಸಾದ.ಆರ್., ಭೂ ವಿಜ್ಞಾನಿ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ದಾವಣಗೆರೆ.
5. ಶ್ರೀಮತಿ ವಿನಯ ಬಣಕಾರ್, ಭೂ ವಿಜ್ಞಾನಿ, ಗಣಿ ಮತ್ತು ಭೂ ವಿಜ್ಞನ ಇಲಾಖೆ, ದಾವಣಗೆರೆ.
6. ಶ್ರೀ ಷಣ್ಮುಖ.ಡಿ.ಎಂ., ಆಡಳಿತಾಧಿಕಾರಿ, ಹೆಚ್.ಕಡದಕಟ್ಟೆ ಗ್ರಾಮ ಪಂಚಾಯಿತಿ.
7. ಶ್ರೀ ಬಿ. ಶಿವಕುಮಾರ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಹೆಚ್.ಕಡದಕಟ್ಟೆ ಗ್ರಾಮ ಪಂಚಾಯಿತಿ.

**ಪರಿಸರ ಸಾರ್ವಜನಿಕ ಸಭೆಯಲ್ಲಿ ಹಾಜರಿದ್ದ ಮೆ: ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಶನ್ ಲಿಮಿಟೆಡ್ ಉದ್ದಿಮೆಯ ವತಿಯಿಂದ ಹಾಜರಿದ್ದ ಪ್ರತಿನಿಧಿಗಳು ಮತ್ತು ಪರಿಸರ ತಾಂತ್ರಿಕ ಸಲಹೆಗಾರರು:**

1. ಶ್ರೀಮತಿ ದ್ವಿತೀಯ, ಸೀನಿಯರ್ ಜಿಯೊಲಾಜಿಸ್ಟ್, ನೋಡಲ್ ಆಫೀಸರ್ ಸ್ಯಾಂಡ್, ಕೆ.ಎಸ್.ಎಂ.ಸಿ.ಎಲ್., ಬೆಂಗಳೂರು.
2. ಶ್ರೀ ತ್ರಿಯಂಬಕ ಶಾಸ್ತ್ರಿ, ವ್ಯವಸ್ಥಾಪಕ (ಸವಳ), ಕೆ.ಎಸ್.ಎಂ.ಸಿ.ಎಲ್., ಹೊಸಪೇಟೆ.
3. ಡಾ.ಬಿನುತ ರಘುನಾಥ್, ಮ್ಯಾನೇಜರ್-ಪರಿಸರ, ಕೆ.ಎಸ್.ಎಂ.ಸಿ.ಎಲ್., ಬೆಂಗಳೂರು.
4. ಶ್ರೀ ಪೃಥ್ವಿರಾಜ್.ಎ., ಪರಿಸರ ಅಭಿಯಂತರರು, ಕೆ.ಎಸ್.ಎಂ.ಸಿ.ಎಲ್., ಬೆಂಗಳೂರು.
5. ಶ್ರೀ ವಿನಿತ್ ಪೌಲ್, ಪರಿಸರ ಅಭಿಯಂತರರು, ಕೆ.ಎಸ್.ಎಂ.ಸಿ.ಎಲ್., ಬೆಂಗಳೂರು.
6. ಶ್ರೀ ಶರತ್ ಹೆಗಡೆ., ಪರಿಸರ ತಾಂತ್ರಿಕ ಸಲಹೆಗಾರರು, ಮೆ॥ಸ್ನೇಹ ಹೈಟೆಕ್ ಪ್ರಾಡಕ್ಟ್ಸ್, ಬೆಂಗಳೂರು.

1. ಪರಿಸರ ಸಾರ್ವಜನಿಕ ಆಲಿಕೆ ಸಭೆಯಲ್ಲಿ ಭಾಗವಹಿಸಿದ ಅಧಿಕಾರಿಗಳ ಸಹಿ ಇರುವ ಹಾಜರಾತಿ ವಹಿಯ ಪ್ರತಿಯನ್ನು **ಅನುಬಂಧ-1** ರಲ್ಲಿ ಲಗತ್ತಿಸಲಾಗಿದೆ.
2. ಪರಿಸರ ಸಾರ್ವಜನಿಕ ಆಲಿಕೆ ಸಭೆಗೆ ಭಾಗವಹಿಸಿದ ಸಾರ್ವಜನಿಕರ ವಿಳಾಸ ಮತ್ತು ಸಹಿ ಇರುವ ಹಾಜರಾತಿ ವಹಿಯ ಪ್ರತಿಯನ್ನು **ಅನುಬಂಧ-2** ರಲ್ಲಿ ಲಗತ್ತಿಸಲಾಗಿದೆ.

**ಪೀಠಿಕೆ**

ಮೆ: ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಶನ್ ಲಿಮಿಟೆಡ್, ಬೆಂಗಳೂರು ರವರು ಬಿದರುಗಡ್ಡೆ ಮರಳು ಬ್ಲಾಕ್ ನಲ್ಲಿ (Block No.01) ಸಾಮನ್ಯ ಮರಳು ಗಣಿಗಾರಿಕೆ ಮಾಡಲು ತುಂಗಭದ್ರಾ ನದಿ ಪಕ್ಕದ Sy.No.19-24, ಬಿದರುಗಡ್ಡೆ ಗ್ರಾಮ, ಹೊನ್ನಾಳಿ ತಾಲ್ಲೂಕು, ದಾವಣಗೆರೆ ಜಿಲ್ಲೆಯಲ್ಲಿ ಒಟ್ಟು 24 ಎಕರೆ ಪ್ರದೇಶದಲ್ಲಿ ವರ್ಷಕ್ಕೆ 1,39,861 ಟನ್‌ಗಳಷ್ಟು ಸಾಮನ್ಯ ಮರಳು ಗಣಿಗಾರಿಕೆಯನ್ನು ಅರೆ-ಯಾಂತ್ರಿಕೃತ ಪದ್ದತಿಯ (Semi-mechanised method) ಪ್ರಕಾರ ಸ್ಥಾಪಿಸಲು ಪ್ರಸ್ತಾವನೆಯನ್ನು ಮಾಡಿರುತ್ತಾರೆ.

ಕೇಂದ್ರ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ಇವರು ಪರಿಸರ (ಸಂರಕ್ಷಣೆ) ಕಾಯ್ದೆ 1986 ಅಡಿಯಲ್ಲಿ ದಿನಾಂಕ 14.09.2006 ರಲ್ಲಿ ಜಾರಿಗೊಳಿಸಿರುವ ಪರಿಸರ ಅಘಾತ ಅಧ್ಯಯನದ ಅಧಿಸೂಚನೆ (ತಿದ್ದುಪಡಿ ದಿನಾಂಕ 01.12.2009) ರನ್ವಯ ಯೋಜನಾ ಪ್ರವರ್ತಕರು ಸದರಿ ಯೋಜನೆಗೆ ಪರಿಸರ ವಿಮೋಚನಾ ಪತ್ರ ಪಡೆಯಬೇಕಾಗಿರುತ್ತದೆ.

ಸದರಿ ಉದ್ದೇಶಿತ ಯೋಜನೆಯು ಮೇಲೆ ತಿಳಿಸಿದ ಅಧಿಸೂಚನೆ ಅಡಿಯಲ್ಲಿ ಒಳಪಡುವುದರಿಂದ ಪರಿಸರ ವಿಮೋಚನಾ ಪತ್ರ ಪಡೆಯಬೇಕಾಗಿರುತ್ತದೆ. ಆ ಮೇರೆಗೆ ಯೋಜನಾ ಪ್ರವರ್ತಕರು ಪರಿಸರ ವಿಮೋಚನಾ ಪತ್ರವನ್ನು ಪಡೆಯಲು ರಾಜ್ಯ ಮಟ್ಟದ ಪರಿಸರ ಅಘಾತ ಅಧ್ಯಯನ ಪ್ರಾಧಿಕಾರ, ಕರ್ನಾಟಕ ಇವರು ಸದರಿ ಯೋಜನೆಯ Terms of References (TOR) No: SEIAA 232 MIN 2021 Date:15-11-2021 ರ ಷರತ್ತುಬದ್ಧ ನಿಬಂಧನೆಗಳ ಅನ್ವಯ ಪರಿಸರ ಸಾರ್ವಜನಿಕ ಆಲಿಕೆ ಸಭೆ ನಡೆಸುವುದು ಕಡ್ಡಾಯವಾಗಿರುತ್ತದೆ.

ಯೋಜನಾ ಪ್ರವರ್ತಕರು ಷರತ್ತುಬದ್ಧ ನಿಬಂಧನೆಗಳನ್ನು ಪಾಲಿಸುವ ಸಲುವಾಗಿ ಮೆ.ಸ್ನೇಹಾ ಹೈ ಟೆಕ್ ಪ್ರೋಡಕ್ಟ್ಸ್, ಬೆಂಗಳೂರು ಇವರು ತಯಾರಿಸಿದ ಕ್ಷಿಪ್ರ ಪರಿಸರ ಆಘಾತ ಅಂದಾಜು ಅಧ್ಯಯನ ವರದಿ ಮತ್ತು ಕಾರ್ಯಕಾರಿ ಸಾರಾಂಶವನ್ನು ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ ಸಿದ್ಧಪಡಿಸಿ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸಿಕೊಡಲು ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಂಗಳೂರು ಇವರಿಗೆ ದಿನಾಂಕ: 30-03-2022 ರಂದು ಮನವಿ ಸಲ್ಲಿಸಿರುತ್ತಾರೆ.

ಯೋಜನಾ ಪ್ರವರ್ತಕರ ಸದರಿ ಮನವಿಯ ಮೇರೆಗೆ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವತಿಯಿಂದ ಜಿಲ್ಲಾಧಿಕಾರಿಗಳು, ದಾವಣಗೆರೆ ಇವರಿಗೆ ಪರಿಸರ ಸಾರ್ವಜನಿಕ ಆಲಿಕೆ ಸಭೆ ನಡೆಸಲು ಸೂಕ್ತ ದಿನಾಂಕ ಹಾಗೂ ಸಮಯವನ್ನು ನೀಡಲು ದಿನಾಂಕ 08-08-2022 ಪತ್ರದ ಮೂಲಕ ಕೋರಲಾಗಿರುತ್ತದೆ.

ಜಿಲ್ಲಾಧಿಕಾರಿಗಳು, ದಾವಣಗೆರೆ ಜಿಲ್ಲೆ, ದಾವಣಗೆರೆ ರವರ ಆದೇಶದನ್ವಯ ದಿನಾಂಕ: 28-09-2022 ರಂದು ಬೆಳಿಗ್ಗೆ 11.00 ಗಂಟೆಗೆ ಯೋಜನಾ ಸ್ಥಳದ ಹತ್ತಿರದ ಶ್ರೀಶೈಲ ಮಲ್ಲಿಕಾರ್ಜುನ ಸಮುದಾಯ ಭವನದಲ್ಲಿ ಪರಿಸರ ಸಾರ್ವಜನಿಕ ಆಲಿಕೆ ಸಭೆ ನಡೆಸಲು ಸಮ್ಮತಿ ಸೂಚಿಸಿರುತ್ತಾರೆ. ಈ ಸಭೆಗೆ ಪೂರಕವಾಗಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ರಾಜ್ಯ ಮಟ್ಟದ ಪ್ರಮುಖ ದಿನ ಪತ್ರಿಕೆಗಳಾದ ವಿಜಯ ಕರ್ನಾಟಕ (ಕನ್ನಡ) ಹಾಗೂ ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್ (ಆಂಗ್ಲ) ಗಳಲ್ಲಿ ದಿನಾಂಕ:27-08-2022 ರಂದು ಪತ್ರಿಕಾ ಪ್ರಕಟಣೆ ದಾವಣಗೆರೆ ಜಿಲ್ಲೆಯ ಸ್ಥಳೀಯ ದಿನಪತ್ರಿಕೆಯಾದ ಜನತಾವಾಣಿ ಪತ್ರಿಕೆಯಲ್ಲಿ ಸಹ ದಿನಾಂಕ: 28-08-2022 ರಂದು ಪರಿಸರ ಸಾರ್ವಜನಿಕ ಆಲಿಕೆ ಸಭೆ ಕುರಿತಾದ ಪ್ರಕಟಣೆಯನ್ನು, ನೀಡಲಾಗಿರುತ್ತದೆ.**(ಅನುಬಂಧ-3)** ಈ ಯೋಜನೆಗೆ ಸಂಬಂಧಿಸಿದಂತೆ ಸಾರ್ವಜನಿಕರ ಅನಿಸಿಕೆ/ಆಕ್ಷೇಪಣೆ/ಸೂಚನೆ/ಸಲಹೆ/ಅಭಿಪ್ರಾಯಗಳನ್ನು ಲಿಖಿತವಾಗಿ 30 ದಿನಗಳ ಒಳಗೆ ಸಲ್ಲಿಸಲು ಕೋರಲಾಗಿತ್ತು.

ಸದರಿ ಯೋಜನೆಗೆ ಸಂಬಂಧಿಸಿದಂತೆ ಯೋಜನಾ ಪ್ರವರ್ತಕರು ಸಲ್ಲಿಸಿದ್ದ ಕ್ಷಿಪ್ರ ಪರಿಸರ ಆಘಾತ ಅಂದಾಜು ಅಧ್ಯಯನದ ವರದಿ ಮತ್ತು ಕಾರ್ಯಕಾರಿ ಸಾರಂಶದ ಕನ್ನಡ ಮತ್ತು ಆಂಗ್ಲ ಭಾಷೆಯ ಪ್ರತಿಗಳನ್ನು ಈ ಕೆಳಕಂಡ ಸ್ಥಳಗಳಲ್ಲಿ ಸಾರ್ವಜನಿಕರ ಪರಾಮರ್ಶೆಗೆ ಇಡಲಾಗಿತ್ತು.

- ಮಾನ್ಯ ಜಿಲ್ಲಾಧಿಕಾರಿಗಳ ಕಾರ್ಯಾಲಯ, ದಾವಣಗೆರೆ,
- ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಕಾರ್ಯಾಲಯ, ಜಿಲ್ಲಾ ಪಂಚಾಯತ್, ದಾವಣಗೆರೆ.
- ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ದಾವಣಗೆರೆ.
- ತಾಲ್ಲೂಕು ಪಂಚಾಯಿತಿ ಕಾರ್ಯಾಲಯ, ಹೊನ್ನಾಳಿ, ದಾವಣಗೆರೆ ಜಿಲ್ಲೆ.
- ತಹಶೀಲ್ದಾರರ ಕಾರ್ಯಾಲಯ, ಹೊನ್ನಾಳಿ, ದಾವಣಗೆರೆ ಜಿಲ್ಲೆ.
- ಗ್ರಾಮ ಪಂಚಾಯತಿ ಕಾರ್ಯಾಲಯ, ಹೆಚ್.ಕಡದಕಟ್ಟೆ, ಹೊನ್ನಾಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ.
- ವಿಭಾಗಿಯ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಚಿತ್ರದುರ್ಗ.
- ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ದಾವಣಗೆರೆ.
- ರಾಜ್ಯ ಮಟ್ಟದ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರ, ಅರಣ್ಯ, ಜೀವಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
- ಸಹಾಯ ಕೇಂದ್ರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ನೆಲ ಅಂತಸ್ತು, ನಂ. 49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು-560001

ಸದರಿ ಪರಿಸರ ಸಾರ್ವಜನಿಕ ಸಭೆಯ ಕುರಿತು ಮೇಲೆ ತಿಳಿಸಿದ ಎಲ್ಲಾ ಇಲಾಖೆಯವರಿಗೆ ಪರಿಸರ ಸಾರ್ವಜನಿಕ ಸಭೆ ನಡೆಯುತ್ತಿರುವ ಕುರಿತು ಹಾಗೂ ಪತ್ರಿಕಾ ಪ್ರಕಟಣೆ ಬಗ್ಗೆ ದಿನಾಂಕ: 29-08-2022 ರಂದು ಮಾಹಿತಿಯನ್ನು ನೀಡಲಾಗಿರುತ್ತದೆ.

ಯೋಜನಾ ಪ್ರದೇಶದ ಸುತ್ತಮುತ್ತಲಿನ ಸಾರ್ವಜನಿಕರಿಗೆ ಉದ್ದೇಶಿತ ವಿಸ್ತರಣಾ ಘಟಕದ ಕುರಿತು ಹಾಗೂ ಸಾರ್ವಜನಿಕ ಆಲಿಕೆ ಸಭೆ ನಡೆಯುವ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಉದ್ದಿಮೆಯ ಸುತ್ತಮುತ್ತಲಿನ ಹಳ್ಳಿಗಳಾದ (ಬಿದರುಗಡ್ಡೆ ಮತ್ತು ಹೊಳೆ ಮಾದಾಪುರ) ಗಳಲ್ಲಿ ಕರ ಪತ್ರಗಳನ್ನು ಹಂಚಲಾಗಿದ್ದು ಮತ್ತು ಧ್ವನಿವರ್ಧಕಗಳ ಮೂಲಕವು ಸಹ ದಿನಾಂಕ 27-09-2022 ರಂದು ಪ್ರಚಾರವನ್ನು ಮಾಡಲಾಗಿರುತ್ತದೆ. (ಛಾಯಾ ಚಿತ್ರಗಳನ್ನು **ಅನುಬಂಧ-4** ರಲ್ಲಿ ಲಗತ್ತಿಸಿದೆ).

ದಿನಾಂಕ :28-09-2022ರಂದು ಗೌರವಾನ್ವಿತ ರಾಜ್ಯಪಾಲರು, ಕರ್ನಾಟಕ ಇವರು ದಾವಣಗೆರೆ ಜಿಲ್ಲೆಗೆ ಭೇಟಿ ನೀಡುವ ಕಾರ್ಯಕ್ರಮವಿರುವುದರಿಂದ ಮಾನ್ಯ ಜಿಲ್ಲಾಧಿಕಾರಿಗಳು, ದಾವಣಗೆರೆ ಇವರು ದಿನಾಂಕ :28-09-2022 ರಂದು ನಡೆಯುವ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸಲು ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ದಾವಣಗೆರೆ ರವರಿಗೆ ಮೌಖಿಕವಾಗಿ ಆದೇಶಿಸಿರುತ್ತಾರೆ.

ಮೇಲೆ ತಿಳಿಸಿದ ಅಧಿಸೂಚನೆಯಲ್ಲಿನ ಎಲ್ಲಾ ವಿಧಿ-ವಿಧಾನಗಳನ್ನು ಕ್ರಮಬದ್ಧವಾಗಿ ನಿಯಮಾನುಸಾರ ಪಾಲಿಸಿ ದಿನಾಂಕ 28-09-2022 ರಂದು ಬೆಳಿಗ್ಗೆ 11.00 ಗಂಟೆಗೆ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಮಾನ್ಯ ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ದಾವಣಗೆರೆ ಇವರ ಅಧ್ಯಕ್ಷತೆಯಲ್ಲಿ ಯೋಜನಾ ಸ್ಥಳದ ಹತ್ತಿರವಿರುವ ಶ್ರೀಶೈಲ ಮಲ್ಲಿಕಾರ್ಜುನ ಸಮುದಾಯ ಭವನ, ಬಿದರುಗಡ್ಡೆ ಗ್ರಾಮ, ಹೊನ್ನಾಳಿ ತಾಲ್ಲೂಕು, ದಾವಣಗೆರೆ ಜಿಲ್ಲೆಯಲ್ಲಿ ಪ್ರಾರಂಭಿಸಲಾಯಿತು.

**ಸಭೆಯ ನಡವಳಿಗಳು**

ಸದಸ್ಯ ಸಮಾವೇಶಕರು ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ, ದಾವಣಗೆರೆ ಪ್ರಾದೇಶಿಕ ಕಛೇರಿಯ ಪರಿಸರ ಅಧಿಕಾರಿ (ಪ್ರಭಾರ) ಶ್ರೀ ಬಿ.ಕೆ.ಸಂತೋಷ್ ಇವರು ಶ್ರೀ ಲೋಕೇಶ್.ಪಿ.ಎನ್., ಕ.ಆ.ಸೇ., ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ದಾವಣಗೆರೆ ಹಾಗೂ ಪ್ರಾದೇಶಿಕ ಹಿರಿಯ ಪರಿಸರ ಅಧಿಕಾರಿಗಳು, ವಲಯ ಕಛೇರಿ, ಕರಾಮಾನಿಮಂ., ಚಿತ್ರದುರ್ಗ ಇವರುಗಳಿಗೆ ಸ್ವಾಗತ ಕೋರಿದರು. ಮೆ.ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಶನ್ ಲಿಮಿಟೆಡ್, ಕಂಪನಿಯ ಪ್ರತಿನಿಧಿಗಳಿಗೆ, ಅಧಿಕಾರಿಗಳಿಗೆ, ಎಲ್ಲಾ ಸಾರ್ವಜನಿಕರಿಗೆ, ಪತ್ರಕರ್ತರಿಗೆ ಹಾಗೂ ಇತರೆ ಇಲಾಖೆಯ ಅಧಿಕಾರಿಗಳಿಗೆ ಮತ್ತು ಸಂಘ ಸಂಸ್ಥೆಯವರಿಗೆ ಸ್ವಾಗತವನ್ನು ಕೋರಿದರು ಹಾಗೂ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ಕೇಂದ್ರ ಸರ್ಕಾರ, ಇವರು ಪರಿಸರ(ಸಂರಕ್ಷಣೆ)ಕಾಯ್ದೆ, 1986 ರಡಿಯಲ್ಲಿ ದಿನಾಂಕ : 14-09-2006 ರಲ್ಲಿ ಜಾರಿಗೊಳಿಸಿರುವ ಪರಿಸರ ಅಘಾತ ಅಧ್ಯಯನದ ಅಧಿಸೂಚನೆ ಬಗ್ಗೆ ಸಂಕ್ಷಿಪ್ತವಾಗಿ ವಿವರಣೆ ನೀಡಿದರು. ಸದರಿ ಯೋಜನೆಗೆ ಸಂಬಂಧಪಟ್ಟ ಪ್ರಾಧಿಕಾರದಿಂದ ಪರಿಸರ ವಿಮೋಚನಾ ಪತ್ರ ಪಡೆಯಬೇಕಾಗಿರುವ ವಿಷಯವನ್ನು ಸಹ ಸಭೆಗೆ ತಿಳಿಸಿದರು. ಸಾರ್ವಜನಿಕ ಪರಿಸರ ಆಲಿಕೆ ಸಭೆಯ ಪೂರ್ವದಲ್ಲಿ ನಿಯಮಾನುಸಾರ ಕೈಗೊಂಡ ಕ್ರಮಗಳ ಬಗ್ಗೆ ವಿವರಣೆಯನ್ನು ನೀಡಿದರು ಹಾಗೂ ಇದೂವರೆಗೂ ಸಾರ್ವಜನಿಕರ ಅಭಿಪ್ರಾಯ, ಟೀಕೆ/ಟಿಪ್ಪಣಿಗಳು ಸ್ವೀಕೃತಿಯಾಗಿರುವುದಿಲ್ಲ. ಸಾರ್ವಜನಿಕ ಆಲಿಕೆಯ ಸಭೆಯ ಅಧ್ಯಕ್ಷತೆಯನ್ನು ವಹಿಸುವಂತೆ ಮತ್ತು ಸಭೆಯನ್ನು ನಡೆಸಿಕೊಡುವಂತೆ ಮಾನ್ಯ ಅಪರ ಜಿಲ್ಲಾಧಿಕಾರಿಗಳನ್ನು ಕೋರಿದರು.

ಶ್ರೀ ಲೋಕೇಶ್.ಪಿ.ಎನ್., ಕ.ಆ.ಸೇ., ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ದಾವಣಗೆರೆ ರವರು ಸಭೆಯನ್ನು ಉದ್ದೇಶಿಸಿ ಯೋಜನೆಗೆ ಪರಿಸರ ಸಾರ್ವಜನಿಕ ವಿಚಾರಣೆಯನ್ನು ನಡೆಸುವುದು ಕಡ್ಡಾಯವಾಗಿದೆ ಎಂದು ತಿಳಿಸಿದರು. ಪರಿಸರ ಅಘಾತ ಅಧ್ಯಯನ ಅಧಿಸೂಚನೆ ದಿನಾಂಕ: 14-09-2006 ರ ಬಗ್ಗೆ ವಿವರವಾದ ಮಾಹಿತಿಯನ್ನು ಸಭೆಯಲ್ಲಿದ್ದ ಸಾರ್ವಜನಿಕರಿಗೆ ತಿಳಿಸಿದರು ಹಾಗೂ ಪರಿಸರ ಸಾರ್ವಜನಿಕ ವಿಚಾರಣೆಯ ಅಗತ್ಯತೆಯನ್ನು ಸಂಕ್ಷಿಪ್ತವಾಗಿ ವಿವರಿಸಿದರು.

ಪ್ರಸ್ತಾವಿತ ಯೋಜನೆಯ ಪವರ್ ಪಾಯಿಂಟ್ ಪ್ರಸ್ತುತಿಯನ್ನು ನೀಡುವಂತೆ ಅವರು ಯೋಜನಾ ಪ್ರತಿಪಾದಕರಿಗೆ ಮಾಹಿತಿ ನೀಡಿದರು, ಅಲ್ಲಿ ವಿಚಾರಣೆಗೆ ಹಾಜರಿದ್ದ ಸಾರ್ವಜನಿಕರು ಪರಿಸರ ಸಮಸ್ಯೆಗಳ ಕುರಿತು ಉದ್ದೇಶಿತ ಯೋಜನೆಗೆ ತಮ್ಮ ಎಲ್ಲಾ ಅಭಿಪ್ರಾಯ/ಸಲಹೆ/ಪತ್ರಗಳನ್ನು ಯೋಜನೆಯ ಬಗ್ಗೆ ಲಿಖಿತ ಅಥವಾ ಮೌಖಿಕವಾಗಿ ಪ್ರಸ್ತುತಪಡಿಸುವಂತೆ ವಿನಂತಿಸಿಕೊಂಡರು. ಈ ನಡವಳಿಯು ಲಿಖಿತ ದಾಖಲೆ ಮತ್ತು ವಿಡಿಯೋಗ್ರಾಫಿ ಎರಡನ್ನು ಒಳಗೊಂಡಿದೆ ಎಂದು ಸಭೆಗೆ ತಿಳಿಸಿದರು.

ಮಾನ್ಯ ಅಪರ ಜಿಲ್ಲಾಧಿಕಾರಿಗಳ ಆದೇಶದಂತೆ ಮೆ.ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಶನ್ ಲಿಮಿಟೆಡ್ ಕಂಪನಿ ಪರವಾಗಿ ಶ್ರೀ ಶರತ್ ಹೆಗಡೆ., ಪರಿಸರ ತಾಂತ್ರಿಕ ಸಲಹೆಗಾರರು, ಮೆ॥ಸ್ನೇಹ ಹೈಟೆಕ್ ಪ್ರಾಡಕ್ಟ್ಸ್, ಬೆಂಗಳೂರು ರವರು ತಯಾರಿಸಿರುವ ಕ್ರಿಯಾತ್ಮಕ ಸಾರಾಂಶದಲ್ಲಿ ತಿಳಿಸಿರುವ ಕ್ರಮಗಳು, ಶಬ್ದದ ಮಟ್ಟದ ಸುಧಾರಿತ ಕ್ರಮಗಳು, ನೀರಿನ ಗುಣಮಟ್ಟ ಸುಧಾರಿತ ಕ್ರಮಗಳು, ಗಾಳಿಯ ಗುಣಮಟ್ಟ ಸುಧಾರಿತ ಕ್ರಮಗಳು, ಮಣ್ಣಿನ ಮರಳಿನ ಧೂಳಿನ ನಿಯಂತ್ರಣ ಕ್ರಮಗಳು, ಸುಧಾರಿತ ಕ್ರಮಗಳು, ಜಮೀನಿನ ಬಳಕೆ, ಸಸ್ಯೀಕರಣ ಪೋಟೋಗಳು, ಗಣಿ ಗುತ್ತಿಗೆ ಪ್ರದೇಶದೊಳಗಿನ ರಕ್ಷಣಾತ್ಮಕ ಕ್ರಮಗಳ ಪೋಟೊ, ಪರಿಸರ ರಕ್ಷಣೆಯ ಬಜೆಟ್ ಚಟುವಟಿಕೆಗಳನ್ನೊಳಗೊಂಡ ವಿವರಗಳನ್ನು ಪವರ್ ಪಾಯಿಂಟ್ ಮೂಲಕ ಸಭೆಗೆ ಮಂಡಿಸಿದರು.

ಸಭೆಯ ಅಧ್ಯಕ್ಷರು ಈ ಉದ್ದೇಶಿತ ಯೋಜನೆಯ ಬಗ್ಗೆ ಪರಿಸರ ಕುರಿತಾಗಿ ಯಾವುದೇಸಲಹೆ/ಅನಿಸಿಕೆ/ಅಭಿಪ್ರಾಯ/ಸೂಚನೆಗಳು ಯಾವುದಾದರೂ ಇದ್ದಲ್ಲಿ ಸಭೆಗೆ ಮಂಡಿಸುವಂತೆ ಸಭೆಯಲ್ಲಿ ನೆರೆದಿದ್ದ ಸಾರ್ವಜನಿಕರನ್ನು ಕೋರಿದರು.

ಆಮೇರೆಗೆ ಸಾರ್ವಜನಿಕರು ಯೋಜನೆಯ ಬಗ್ಗೆ ತಮ್ಮ ಸಲಹೆ/ಅನಿಸಿಕೆ/ಅಭಿಪ್ರಾಯ/ಸೂಚನೆಗಳನ್ನು ಈ ಕೆಳಕಂಡಂತೆ ಮಂಡಿಸಿದರು.

1. **ಶ್ರೀ ಮಂಜಪ್ಪ. ಬಿ.ಹೆಚ್., ಅಧ್ಯಕ್ಷರು, ಶ್ರೀ ಮಲ್ಲಿಕಾರ್ಜುನ ಟ್ರಸ್ಟ್, ಬಿದರುಗಡ್ಡೆ ಗ್ರಾಮ** ರವರು ಮಾತನಾಡುತ್ತಾ, ತುಂಗಭದ್ರ ನದಿಯಲ್ಲಿ ಖಾಸಗಿಯವರು ಹಗಲು ರಾತ್ರಿಯನ್ನದೇ ಅಕ್ರಮ ಮರಳುಗಣಿಗಾರಿಕೆ ನಡೆಸುತ್ತಿರುವುದರಿಂದ ಗ್ರಾಮದಲ್ಲಿ ಧೂಳು ಆಗುತ್ತಿರುತ್ತದೆ. ಸರ್ಕಾರದಿಂದ ಮರಳು ಗಣಿಗಾರಿಕೆ ನಡೆಸುವುದು ಯೋಜನೆಯು ಬಹಳ ಉಪಯುಕ್ತವಾಗಿದೆ. ಕಳೆದ 5 ವರ್ಷಗಳಿಂದ ಖಾಸಗಿಯವರು ನಡೆಸುತ್ತಿರುವ ಮರಳಗಣಿಗಾರಿಕೆಯಿಂದ ಬಹಳ ತೊಂದರೆಯಾಗಿರುತ್ತದೆ. ಇದು ಒಳ್ಳೆಯ ಯೋಜನೆ, ಇದನ್ನು ಸಮರ್ಪಕವಾಗಿ ಅನುಷ್ಠಾನಗೊಳ್ಳಬೇಕು. ಇದರಿಂದ ಸರ್ಕಾರಕ್ಕೆ ಆದಾಯ ಬರುತ್ತದೆ. ಹಗಲು ರಾತ್ರಿ ಮರಳು ತೆಗೆಯುವುದರಿಂದ ಪರಿಸರದ ಮೇಲೆ ತೊಂದರೆಯಾಗುತ್ತದೆ. ಸಂಬಂಧಿಸಿದ ಇಲಾಖೆಯರು ಈ ಬಗ್ಗೆ ಕ್ರಮಕೈಗೊಳ್ಳಬೇಕು. 5 ವರ್ಷಗಳಿಂದ ಜಮೀನುಗಳ ಜಾಗದಲ್ಲಿ ದಾರಿ ಮಾಡಿಕೊಂಡು ಗಣಿಗಾರಿಕೆ ಮಾಡುವುದನ್ನು ತಕ್ಷಣ ತಡೆಗಟ್ಟುವುದು. ಗ್ರಾಮದಿಂದ ಹೊಳೆಯ ದಡದವರೆಗೆ ಸಿಮೆಂಟ್ ರಸ್ತೆ ಆಗಬೇಕು. ಆಗದಿದ್ದರೆ ಧೂಳಿನಿಂದ ತೊಂದರೆಯಾಗುತ್ತದೆ. ತಕ್ಷಣವೇ ಕ್ರಮಗಳನ್ನು ತೆಗೆದುಕೊಳ್ಳಬೇಕು. ಖಾಸಗಿಯವರಿಂದ ಮರಳು ಗಣಿಗಾರಿಕೆಯನ್ನು ತಡೆದು, ಸರ್ಕಾರದವತಿಯಿಂದ ಮರಳು ಗಣಿಗಾರಿಕೆ ನಡೆಸುವುದರಿಂದ ಸರ್ಕಾರಕ್ಕೆ ಹೆಚ್ಚಿನ ಆದಾಯ ಬರುತ್ತದೆ. ಗ್ರಾಮದಲ್ಲಿ ಸ್ಟಾಕ್‌ಯಾರ್ಡ್ ನಿರ್ಮಿಸುವದರಿಂದ ಬರುವ ಆದಾಯವನ್ನು ಟ್ರಸ್ಟ್‌ಗೆ ನೀಡುವುದು ಎಂದು ತಿಳಿಸಿದರು ಹಾಗೂ ಲಿಖಿತ ಮನವಿಯನ್ನು ಈ ಸಂದರ್ಭದಲ್ಲಿ ಸಲ್ಲಿಸಿದರು. ಅನುಬಂಧ-03 ರಲ್ಲಿ ಲಗತ್ತಿಸಿದೆ.

2. **ಶ್ರೀ ಗಣೇಶಪ್ಪ. ಪಿ.ಹೆಚ್., ಬಿದರಗಡ್ಡೆ ಗ್ರಾಮ:-** ರವರು ಮಾತನಾಡುತ್ತಾ ಉದ್ದೇಶಿತ ಜಮೀನುಗಳಾದ ಸ.ನಂ.19-24 ರ ಪಕ್ಕದಲ್ಲಿರುವ 25, 26 ಸರ್ವೆ ನಂಬರ್‌ಗಳಲ್ಲಿ ಮರಳು ಬಹಳ ಇರುತ್ತದೆ. ಸದರಿ ಸರ್ವೆ ನಂಬರ್‌ಗಳ ಜಮೀನುಗಳನ್ನು ಸಹ ಸದರಿ ಯೋಜನೆಯಲ್ಲಿ ಅಳವಡಿಸಿಕೊಳ್ಳಲು ಕೋರಿದರು.

3. **ಶ್ರೀ. ಬಂಗಾರಪ್ಪ. ಬಿ.ಹೆಚ್., ಬಿದರಗಡ್ಡೆ ಗ್ರಾಮ-** ರವರು ಮಾತನಾಡುತ್ತಾ, ಮರಳಿಗೆ ಬಹಳ ಬೇಡಿಕೆ ಇರುತ್ತದೆ. ಗ್ರಾಮದಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು, ಗ್ರಾಮದಲ್ಲಿ ಮನೆ ಕಟ್ಟುವವರಿಗೆ ಯಾವುದೇ ಶುಲ್ಕವನ್ನು ವಿಧಿಸದೆ ಮರಳನ್ನು ಉಚಿತವಾಗಿ ಕೊಡಲು ಕೋರಿದರು.

4. **ಶ್ರೀ ನಾಗೇಶಪ್ಪ.ಎನ್., ಬಿದರಗಡ್ಡೆ ಗ್ರಾಮ** - ರವರು ಮಾತನಾಡುತ್ತಾ, ಸದರಿ ಯೋಜನೆಯು ತುಂಬಾ ಪ್ರಯೋಜವಿದ್ದು, ಮಕ್ಕಳಿಗೆ ತೊಂದರೆಯಾಗದಂತೆ ಕ್ರಮಕೈಗೊಳ್ಳುವಂತೆ ಸಭೆಯಲ್ಲಿ ಕೋರಿದರು. ಗ್ರಾಮಕ್ಕೆ ಮೊಬೈಲ್ ನೆಟ್‌ವರ್ಕ್ ಇಲ್ಲದೆ ಆನ್‌ಲೈನ್ ತರಗತಿಗಳಿಗೆ ಹಾಜರಾಗಲು ತೊಂದರೆಯಾಗಿರುತ್ತದೆ. ಆದ್ದರಿಂದ ಅಪರ ಜಿಲ್ಲಾಧಿಕಾರಿಗಳು ಈ ಬಗ್ಗೆ ಗಮನವಹಿಸುವಂತೆ ಕೋರಿದರು.

5. **ಶ್ರೀ ನಾಗರಾಜ, ಬಿದರಗಡ್ಡೆ ಗ್ರಾಮ-** ರವರು ಮಾತನಾಡುತ್ತಾ, ನಮ್ಮ ಗ್ರಾಮಕ್ಕೆ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸುತ್ತೇನೆ. ಮರಳುಗಣಿಗಾರಿಕೆಯಿಂದ ಆಗುವ ಅನುಕೂಲಗಳು ಹಾಗೂ ಅನಾನುಕೂಲಗಳ ಬಗ್ಗೆ ತಿಳಸಬೇಕು. ಈ ಸಂಬಂಧ ಹಳ್ಳಿಯಲ್ಲಿ ಸಿಮೆಂಟ್ ರಸ್ತೆಗೆ ಅನುಮತಿ ಕೊಡಬೇಕೆಂದು ಕೋರಿದರು.

6. **ಶ್ರೀ ಪ್ರಭಯ್ಯ. ಬಿ.ಎಂ., ಬಿದರಗಡ್ಡೆ ಗ್ರಾಮ-** ರವರು ಮಾತನಾಡುತ್ತಾ, ಮರಳು ಗಣಿಗಾರಿಕೆ ನಡೆಸಲು ಉದ್ದೇಶಿಸಿರುವ ಸ.ನಂ.19-24 ರಲ್ಲಿ ಸಾರ್ವಜನಿಕರ ಅನುಕೂಲಕ್ಕಾಗಿ ಸಾಕಷ್ಟು ಮರಳು ಇದೆ ಅದೇ ರೀತಿ ಸ.ನಂ.55 ರ ಜಮೀನನ್ನು ಕೂಡ ಖರೀದಿ ಮಾಡಬೇಕು. ಕೆಲ ಸರ್ಕಾರಿ ಜಮೀನುಗಳನ್ನು ಟ್ರಸ್ಟ್ ಹೆಸರಿಗೆ ನೋಂದಣಿ ಮಾಡಲು ಆಗುತ್ತಿಲ್ಲ. ಖಾತೆ ಮಾಡಿಸಿಕೊಳ್ಳಲು ಸಹ ತೊಂದರೆಯಾಗುತ್ತಿರುತ್ತದ ಎಂದು ಸಭೆಯಲ್ಲಿ ತಿಳಿಸಿದರು.

7. **ಶ್ರೀ ಈಶ್ವರಪ್ಪ, ಬಿದರಗಡ್ಡೆ ಗ್ರಾಮ-**ರವರು ಮಾತನಾಡುತ್ತಾ, ಸ.ನಂ.55 ರಲ್ಲಿ ಏನನ್ನು ಮಾಡಲು ಆಗುತ್ತಿಲ್ಲ, ನಮ್ಮ ಹೆಸರಿಗೆ ಖಾತೆನು ಆಗುತ್ತಿಲ್ಲವೆಂದು ತಿಳಿಸಿದರು.

8. **ಶ್ರೀ ಚನ್ನೇಶ್ವರ.ಬಿ.ಎಂ., ಬಿದರಗಡ್ಡೆ ಗ್ರಾಮ**-ರವರು ಮಾತನಾಡುತ್ತಾ, ಸ.ನಂ.9,7,57 ಈ ನಾಲ್ಕು ಸರ್ವೇ ನಂಬರ್ ಜಮೀನುಗಳು ಖಾತೆ ಆಗಿರುತ್ತವೆ, ಅವುಗಳನ್ನು ಸರಿಪಡಿಸಿಕೊಡಬೇಕೆಂದು ಕೋರಿದರು.

9. **ಶ್ರೀ ವಿನಾಯಕ, ಬಿದರಗಡ್ಡೆ ಗ್ರಾಮ**-ರವರು ಮಾತನಾಡುತ್ತಾ, ಊರಿನಲ್ಲಿ ಸಿಮೆಂಟ್ ರಸ್ತೆಗಳು ಆಗಿರುತ್ತವೆ, ಯಾವ ರಸ್ತೆಗೂ ಚರಂಡಿ ವ್ಯವಸ್ಥೆ ಇರುವುದಿಲ್ಲ, ಮಳೆ ನೀರು ತಗ್ಗು ಪ್ರದೇಶಗಳಿಗೆ ಬಂದು ತೊಂದರೆಯಾಗುತ್ತಿರುತ್ತದೆ ಎಂದು ತಿಳಿಸಿದರು.

10. **ಶ್ರೀ ಸತೀಶ್, ಬಿದರಗಡ್ಡೆ ಗ್ರಾಮ**-ರವರು ಮಾತನಾಡುತ್ತಾ, ಮರಳನ್ನು ಸಾಗಿಸಲು ಹೊನ್ನಾಳಿ-ಬಿದರಗಡ್ಡೆಯವರೆಗೆ ಸಿಮೆಂಟ್ ರಸ್ತೆಯಾಗಬೇಕೆಂದು ಕೋರಿದರು.

11. **ಶ್ರೀ ಲೋಹಿತ್.ಪಿ.ಎಂ., ಬಿದರಗಡ್ಡೆ ಗ್ರಾಮ**-ರವರು ಮಾತನಾಡುತ್ತಾ, ವರ್ಷದಲ್ಲಿ 150 ರಿಂದ 160 ದಿನ ಮರಳು ಗಣಿಗಾರಿಕೆ, ಮರಳನ್ನು ಒಂದು ಮೀಟರ್ ಆಳವಾಗಿ ತೆಗೆಯಲು ಯಾಂತ್ರಿಕ ಹಾಗೂ ಮಾನವ ಸಂಪನ್ಮೂಲದಿಂದ ಮರಳು ತೆಗೆಯುವ ಬಗ್ಗೆ ಹಾಗೂ ನೀರಿನಲ್ಲಿ ಅಥವಾ ನೀರಿನ ಮೇಲೆ ಮರಳು ತೆಗೆಯುವ ಬಗ್ಗೆ ವಿವರಣೆ ಕೊಡಬೇಕಾಗಿ ಕೋರಿದರು.

12. **ಶ್ರೀ ಚಂದ್ರಪ್ಪ, ಬಿದರಗಡ್ಡೆ ಗ್ರಾಮ**-ರವರು ಮಾತನಾಡುತ್ತಾ, ಬಿದರಗಡ್ಡೆ-ಹೊನ್ನಾಳಿಯವರೆಗೆ ರಸ್ತೆ ನಿರ್ಮಾಣ ಮಾಡಿಕೊಡಬೇಕು. ಗ್ರಾಮದಲ್ಲಿ ಉಪ್ಪು ನೀರು ಬರುತ್ತಿದ್ದು, ಆದುದರಿಂದ ಗ್ರಾಮದಲ್ಲಿ ಕುಡಿಯಲು ಹೊಳೆ ನೀರಿನ ವ್ಯವಸ್ಥೆ ಮಾಡಿಕೊಡಬೇಕಾಗಿ ಕೋರಿದರು.

13. **ಶ್ರೀ ಆಂಜನೇಯ, ಸಮಗ್ರ ಸಮುದಾಯ ಪರಿವರ್ತನೆ**-ರವರು ಮಾತನಾಡುತ್ತಾ, ಸರ್ಕಾರದ ಮರಳು ಗಣಿಗಾರಿಕೆಗೆ ಅವಕಾಶ ಮಾಡಿಕೊಡಬೇಕು, ಇದರಿಂದ ಸರ್ಕಾರಕ್ಕೆ ಹಾಗೂ ಗ್ರಾಮದ ಅಭಿವೃದ್ಧಿಗೆ ಅನುಕೂಲವಾಗುತ್ತದೆ ಎಂದು ತಿಳಿಸಿದರು.

14. **ಶ್ರೀ ರುದ್ರೇಶ್, ಬಿದರಗಡ್ಡೆ ಗ್ರಾಮ**-ರವರು ಮಾತನಾಡುತ್ತಾ, ಮರಳು ಗಣಿಗಾರಿಕೆಯಿಂದ ನೇರ ಹಾಗೂ ಪರೋಕ್ಷ ಉದ್ಯೋಗಾವಕಾಶ ದೊರೆಯುವ ಬಗ್ಗೆ ವಿವರಿಸುವಂತೆ ಕೋರಿದರು. ಸಿ.ಎಸ್.ಆರ್. ಯಡಿಯಲ್ಲಿ ಗ್ರಾಮಕ್ಕೆ ಅನುಕೂಲ ಮಾಡಿಕೊಡಬೇಕು. ಅಕ್ರಮ ಮರಳು ಗಣಿಗಾರಿಕೆಯನ್ನು ತಡೆಯಲು ಮನವಿ ಕೊಟ್ಟರೂ **ಸಹ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ.**

15. **ಶ್ರೀ ದೇವರಾಜ, ಬೆಂಗಳೂರು**-ರವರು ಮಾತನಾಡುತ್ತಾ, ಗ್ರಾಮದಲ್ಲಿ ರಸ್ತೆಯ ಅವಶ್ಯಕತೆಯಿದೆ, ಪರಿಸರದ ಬಗ್ಗೆ ಕಾಳಜಿವಹಿಸಿ ಮರಳು ಗಣಿಗಾರಿಕೆ ನಡೆಸಲು ಕೋರಿದರು.

16. **ಶ್ರೀ ಮಂಜುನಾಥ. ಬಿ.ಸಿ., ಬಿದರುಗಡ್ಡೆ ಗ್ರಾಮ**-ರವರು ಮಾತನಾಡುತ್ತಾ, ಹೊನ್ನಾಳಿ-ಬಿದರುಗಡ್ಡೆ ಗ್ರಾಮದ ರಸ್ತೆಯ ಬದಿಗಳಲ್ಲಿ ಮರಗಳನ್ನು ಬೆಳೆಸಲು ಕೋರಿದರು.

17. **ಶ್ರೀ ಶಿವಕುಮಾರ್, ಬಿದರುಗಡ್ಡೆ ಗ್ರಾಮ**-ರವರು ಮಾತನಾಡುತ್ತಾ, ಮರಳನ್ನು ಸಂಗ್ರಹಿಸಲು ಸಮತಟ್ಟು ಮಾಡಿ ಸ್ಟಾಕ್ ಯಾರ್ಡ್ ಮಾಡಿರುತ್ತಾರೆ. ಸದರಿ ಸ್ಥಳದಲ್ಲಿ ತ್ಯಾಜ್ಯವನ್ನು ವಿಲೇವಾರಿ ಮಾಡಲು ತೊಂದರೆಯಾಗುತ್ತದೆ. ಸ್ಟಾಕ್‌ಯಾರ್ಡ್ ಬೇರೆಡೆಗೆ ಮಾಡುವ ಬದಲು ಊರಿನ ಒಳಗಡೆ ಸ್ಟಾಕ್‌ಯಾರ್ಡ್ ಮಾಡುವುದರಿಂದ ಅಕ್ರಮ ತಡೆಯಬಹುದು, ಸ್ಟಾಕ್‌ಯಾರ್ಡ್ ಊರಿನ ಒಳಗಡೆ ಮಾಡಬೇಕು, ಸ.ನಂ.27 ರಲ್ಲಿ ಮರಳು ಇದೆ ಅದನ್ನು ಸದರಿ ಯೋಜನೆಯಲ್ಲಿ ತೆಗೆದುಕೊಳ್ಳುವಂತೆ ಕೋರಿದರು.

---

## ಅನುಬಂಧ

1. ಪರಿಸರ ಸಾರ್ವಜನಿಕ ಆಲಿಕೆ ಸಭೆಗೆ ಭಾಗವಹಿಸಿದ ಅಧಿಕಾರಿಗಳ ಸಹಿ ಇರುವ ಹಾಜರಾತಿ ವಹಿಯ ಪ್ರತಿಯನ್ನು **ಅನುಬಂಧ-1** ರಲ್ಲಿ ಲಗತ್ತಿಸಲಾಗಿದೆ.

2. ಪರಿಸರ ಸಾರ್ವಜನಿಕ ಆಲಿಕೆ ಸಭೆಗೆ ಭಾಗವಹಿಸಿದ ಸಾರ್ವಜನಿಕರ ವಿಳಾಸ ಮತ್ತು ಸಹಿ ಇರುವ ಹಾಜರಾತಿ ವಹಿಯ ಪ್ರತಿಯನ್ನು **ಅನುಬಂಧ-2** ರಲ್ಲಿ ಲಗತ್ತಿಸಲಾಗಿದೆ.

3. ರಾಜ್ಯ ಮಟ್ಟದ ಪ್ರಮುಖ ದಿನ ಪತ್ರಿಕೆಗಳಾದ ವಿಜಯ ಕರ್ನಾಟಕ (ಕನ್ನಡ) ಹಾಗೂ ಇಂಡಿಯನ್ ಎಕ್ಸ್‌ಪ್ರೆಸ್ (ಆಂಗ್ಲ) ಗಳಲ್ಲಿ ದಿನಾಂಕ:27-08-2022 ರಂದು ಪತ್ರಿಕಾ ಪ್ರಕಟಣೆ ದಾವಣಗೆರೆ ಜಿಲ್ಲೆಯ ಸ್ಥಳೀಯ ದಿನಪತ್ರಿಕೆಯಾದ ಜನತಾವಾಣಿ ಪತ್ರಿಕೆಯಲ್ಲಿ ದಿನಾಂಕ:28-08-2022 ರಂದು ಪರಿಸರ ಸಾರ್ವಜನಿಕ ಆಲಿಕೆ ಸಭೆ ಕುರಿತಾದ ಪ್ರಕಟಣೆಯ ಪ್ರತಿಯನ್ನು **ಅನುಬಂಧ-3** ರಲ್ಲಿ ಲಗತ್ತಿಸಲಾಗಿದೆ.

4. ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಪ್ರಚಾರಕ್ಕಾಗಿ ದಿನಾಂಕ 27-09-2022 ರಂದು ಕರಪತ್ರಗಳನ್ನು ವಿತರಿಸಲಾದ ಮತ್ತು ಧ್ವನಿವರ್ಧಕಗಳ ಮುಖೇನ ಯೋಜನಾ ಸ್ಥಳದ ಸುತ್ತಮುತ್ತಲ ಗ್ರಾಮಗಳಲ್ಲಿ ಸಾರ್ವಜನಿಕವಾಗಿ ಪ್ರಚಾರ ಮಾಡಲಾದ ಸಮಯದಲ್ಲಿ ತೆಗೆದುಕೊಂಡ ಛಾಯಾಚಿತ್ರಗಳ ಪ್ರತಿಯನ್ನು **ಅನುಬಂಧ-4** ರಲ್ಲಿ ಲಗತ್ತಿಸಲಾಗಿದೆ.

5. ಸಾರ್ವಜನಿಕರಿಂದ ಪರಿಸರ ಸಾರ್ವಜನಿಕ ಸಭೆಯ ಸಮಯದಲ್ಲಿ ಒಟ್ಟುಬಲಿಖಿತ ಹೇಳಿಕೆ/ ಆಕ್ಷೇಪಣೆಗಳು ಸ್ವೀಕೃತಿಯಾಗಿರಯತ್ತವೆ ಅವುಗಳನ್ನು ಅನುಬಂಧ-5 ರಲ್ಲಿ ಲಗತ್ತಿಸಲಾಗಿದೆ.

6. ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಪ್ರಕ್ರಿಯೆಯ ಛಾಯಾಚಿತ್ರಗಳ ಪ್ರತಿಯನ್ನು **ಅನುಬಂಧ-6** ರ ಲಗತ್ತಿಸಲಾಗಿದೆ.

7. ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಆಡಿಯೋ ಮತ್ತು ವಿಡಿಯೋ ಇರುವ ಸಿ.ಡಿ. ಗಳ ಪ್ರತಿಯನ್ನು **ಅನುಬಂಧ-7** ರಲ್ಲಿ ಲಗತ್ತಿಸಲಾಗಿದೆ.

**ಶ್ರೀ ಲೋಕೇಶ್, ಕ.ಆ.ಸೇ.**
ಅಪರ ಜಿಲ್ಲಾಧಿಕಾರಿಗಳು ಹಾಗೂ
ದಾವಣಗೆರೆ ಅಪರ ಜಿಲ್ಲಾ ದಂಡಾಧಿಕಾರಿಗಳು, ಅಧ್ಯಕ್ಷರು
ಜಿಲ್ಲಾ ಪರಿಸರ ಸಾರ್ವಜನಿಕ ಆಲಿಕೆ

ಕೊನೆಯಲ್ಲಿ ಸಾರ್ವಜನಿಕ ಆಲಿಕೆ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಶ್ರೀ ಲೋಕೇಶ್.ಪಿ.ಎನ್., ಕ.ಆ.ಸೇ., ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ದಾವಣಗೆರೆರವರು ತಮ್ಮ ಅಧ್ಯಕ್ಷೀಯ ಮಾತುಗಳನ್ನಾಡುತ್ತಾ, ಸದರಿ ಸಭೆಯು ಪರಿಸರ ಸಾರ್ವಜನಿಕ ಸಭೆಯಾಗಿದ್ದು, ಇದರಲ್ಲಿ ಎಲ್ಲರಿಗೂ ಮಾತನಾಡಲು ಮುಕ್ತ ಅವಕಾಶವನ್ನು ಕಲ್ಪಿಸಲಾಗಿದೆ. ಹಾಗು ತಾವು ಮಾತನಾಡಿದ ಪರ/ವಿರೋಧ ಅಭಿಪ್ರಾಯಗಳನ್ನ ದಾಖಲಿಸಲಾಗಿದೆ. ಈ ಸಭೆಯಲ್ಲಿ ನಾವುಗಳು ಯಾವುದೇ ತಿರ್ಮಾನ ತೆಗೆದುಕೊಳ್ಳುವದಿಲ್ಲ, ಈ ಸಭೆಯ ಉದ್ದೇಶ ಸಾರ್ವಜನಿಕರ ಅಭಿಪ್ರಾಯ ಹಾಗೂ ಸಲ್ಲಿಸಿರುವ ಮೌಖಿಕ ಮತ್ತು ಲಿಖಿತ ಅಭಿಪ್ರಾಯಗಳನ್ನು ಸಂಗ್ರಹಿಸಿ, ಹಾಗೂ ತಾವುಗಳು ಸಲ್ಲಿಸಿರುವ ಮನವಿಗಳು, ಹೆಚ್ಚಿನ ಸಂಖ್ಯೆಯ ಲಿಖಿತ ಅಭಿಪ್ರಾಯಗಳು/ ಸಲಹೆಗಳು/ಆಕ್ಷೇಪಣೆಗಳನ್ನು ಸ್ವೀಕರಿಸಿದ್ದೇವೆ. ಅದನ್ನು ದಾಖಲಿಸಲಾಗುವುದು. ಈ ಸಭೆಯ ನಡವಳಿಯನ್ನು ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ದಾಖಲಿಸಿ, ಛಾಯಾಚಿತ್ರಗಳ (ಪ್ರತಿಯನ್ನು **ಅನುಬಂಧ-5** ರಲ್ಲಿ ಲಗತ್ತಿಸಲಾಗಿದೆ) ವಿಡಿಯೋ ಇರುವ ಸಿ.ಡಿ. ಗಳ (ಪ್ರತಿಯನ್ನು **ಅನುಬಂಧ-6** ರಲ್ಲಿ ಲಗತ್ತಿಸಲಾಗಿದೆ) ಇದನ್ನು ರಾಜ್ಯ ಮಟ್ಟದ ಪರಿಸರ ಅಘಾತ ಅಧ್ಯಯನ ಪ್ರಾಧಿಕಾರ, ಅರಣ್ಯ, ಜೀವಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು ಇವರಿಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಕೇಂದ್ರ ಕಛೇರಿ ಬೆಂಗಳೂರು ರವರ ಮುಖಾಂತರ ಕಳುಹಿಸಿಕೊಡಲಾಗುವುದು ಎಂದು ತಿಳಿಸಿದರು.

ಈ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಂಡ ಎಲ್ಲಾ ಸಾರ್ವಜನಿಕರಿಗೆ ಮತ್ತು ಸುತ್ತಮುತ್ತಲಿನ ಗ್ರಾಮಸ್ಥರಿಗೆ ಧನ್ಯವಾದಗಳನ್ನು ತಿಳಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಿದರು.

ಶ್ರೀ ಲೋಕೇಶ್.ಪಿ.ಎನ್., ಕ.ಆ.ಸೇ.
ಅಪರ ಜಿಲ್ಲಾಧಿಕಾರಿಗಳು ಹಾಗೂ
ಅಪರ ಜಿಲ್ಲಾ ದಂಡಾಧಿಕಾರಿಗಳು,
ದಾವಣಗೆರೆ ಜಿಲ್ಲೆ.